ಮಾನ್ಯ ಅಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ಧರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಬೈಲಹೊಂಗಲ

**ಸಿ.ಸಿ.ನಂ.1480/2022**

ರಾಜ್ಯದ ಪರವಾಗಿ ದೊಡ್ಡವಾಡ ಪೊಲೀಸ ಠಾಣೆ

......ಪಿರ್ಯಾದುದಾರರು

// ವಿರುದ್ಧ //

ನಿಂಗಪ್ಪ ಕಡ್ಡೆನ್ನವರ
ವಯಾಃ 32 ವರ್ಷ, ಉಃ ಒಕ್ಕಲುತನ
ಸಾಃ ಗುಡಿಕಟ್ಟಿ ತಾಃ ಬೈಲಹೊಂಗಲ.

.......ಆರೋಪಿತರು

<u>ಆರೋಪಣೆ</u>

ಅಭಿಯೋಜನೆಯವರು ಆರೋಪಿಯಾದ ನಿಮ್ಮ ಮೇಲೆ ಆರೋಪಿಸುವುದೇನೆಂದರೆ, ದೊಡ್ಡವಾಡ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ಬ ಬೆಳವಡಿ ಗ್ರಾಮದ ಬಾಳಪ್ಪ ಇವರ ಜಮೀನ ಹತ್ತಿರ ದಿ. 08-03-2022 ರಂದು 19-45 ಗಂಟೆ ಆರೋಪಿಯಾದ ನೀವು ನಡೆಸುತ್ತಿದ್ದ ಮೋಟಾರ ಸೈಕಲ ನಂ. ಕೆಎ-24-ಎಕ್ಸ-9158 ನೇದ್ದರ ಹಿಂದಿನ ಸೀಟ ಮೇಲೆ ಮಹಾಂತೇಶ ಇವರನ್ನು ಕೂಡಿಸಿಕೊಂಡು ಬೈಲಹೊಂಗಲ ಕಡೆಯಿಂದ ಬೆಳವಡಿ ಕಡೆಗೆ ಅತೀವೇಗ ನಿರ್ಲಕ್ಷತನದಿಂದ ಹಾಗೂ ದುಡುಕಿನಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದಿರುತ್ತೀರಿ. ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.279 ರ ಪ್ರಕಾರ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ಹೇಳಿದ ಮೋಟಾರ ಸೈಕಲ ಹಿಂದೆ ಮಹಾಂತೇಶ ಇವರನ್ನು ಕೂಡಿಕೊಂಡು ಬೈಲಹೊಂಗಲ ಕಡೆಯಿಂದ ಬೆಳವಡಿ ಕಡೆಗೆ ಅತೀವೇಗ ನಿರ್ಲಕ್ಷತನದಿಂದ ಹಾಗೂ ದುಡುಕಿನಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಅಪಘಾತ

ಮಾಡಿ ಮಹಾಂತೇಶ ಇವರಿಗೆ ಕಿವಿಗೆ ಎಡಗಡೆ ಕಾಲಿಗೆ ತಲೆಗೆ ಭಾರಿ ಗಾಯ ಪಡಿಸಿರುತ್ತೀರಿ ಭಾರತೀಯ ದಂಡ ಸಂಹಿತೆ ಕಲಂ. 338 ರಡಿ ಪ್ರಕಾರ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ಹೇಳಿದ ಮೋಟಾರ ಸೈಕಲ ಹಿಂದೆ ಮಹಾಂತೇಶ ಇವರನ್ನು ಕೂಡಿಕೊಂಡು ಬೈಲಹೊಂಗಲ ಕಡೆಯಿಂದ ಬೆಳವಡಿ ಕಡೆಗೆ ಅತೀವೇಗ ನಿರ್ಲಕ್ಷತನದಿಂದ ಹಾಗೂ ದುಡುಕಿನಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಅಪಘಾತ ಮಾಡಿ ಮಹಾಂತೇಶ ಇವರಿಗೆ ಕಿವಿಗೆ ಎಡಗಡೆ ಕಾಲಿಗೆ ತಲೆಗೆ ಭಾರಿ ಗಾಯ ಪಡಿಸಿ ಅವರಿಗೆ ಉಪಚಾರ ಫಲಿಸದೆ ಅವರು ದಿ.10-03-2022 ರಂದು 07-50 ಗಂಟೆ ಮೃತಪಟ್ಟಿದ್ದು ಭಾರತೀಯ ದಂಡ ಸಂಹಿತೆ ಕಲಂ. 304 ಎ ರಡಿ ಪ್ರಕಾರ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಆರೋಪಿಯಾದ ನೀವು ಅಪಘಾತ ಪಡಿಸಿದ ಮೋಟಾರ ಸೈಕಲಗೆ ಯಾವುದೇ ಚಾಲನ ಪರವಾನಿಗೆ ಪತ್ರ ಹೊಂದದ ಮತ್ತು ವಿಮೆ ಮಾಡಿಸದೆ ಸಾರ್ವಜನಿಕ ರಸ್ತೆ ಮೇಲೆ ಚಲಾಯಿಸಿದ್ದು ಮೋಟರ ವಾಹನ ಕಾಯ್ದೆ ಕಲಂ. 3 ಸಹ ಕಲಂ.181 ಮತ್ತು 146 ಸಹಕಲಂ 196 ರಡಿ ಪ್ರಕಾರ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

1) ಈಗ ನಾನು ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿದೆಯೇ?
ಉತ್ತರಃ
2) ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ಇಲ್ಲವೋ ?

ಉತ್ತರಃ

(ಈ ಮೇಲಿನ ಆರೋಪಣೆ ಸಾರಾಂಶವನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಈ ದಾಖಲೆಯು ಆರೋಪಿತರು ನೀಡಿದ ನಿಜವಾದ ಮತ್ತು ಅವರ ಪೂರ್ಣವಾದ ಹೇಳಿಕೆಯನ್ನು ಒಳಗೊಂಡಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.)

ದಿನಾಂಕಃ 17.01.2023 ಅ.ಪ್ರ.ದ.ನ್ಯಾ.ದಂ.ಬೈಲಹೊಂಗಲ